# National
# Kannada
# 29.06.2025 / 7.35 am

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

ಮುಖ್ಯಾಂಶಗಳು

೧. ಮನ್ ಕಿ ಬಾತ್; ೧೨೩ನೇ ಸಂಚಿಕೆಯಲ್ಲಿಂದು ಸಮಸ್ತ ಭಾರತೀಯರನ್ನುದ್ದೇಶಿಸಿ ಪ್ರಧಾನಿ ನರೇಂದ್ರ ಮೋದಿ ಭಾಷಣ

೨. ಭಾರತದ ಗಗನಯಾತ್ರಿ ಶುಭಾಂಶು ಶುಕ್ಲಾ ಅವರೊಂದಿಗೆ ಪ್ರಧಾನಿ ಸಂವಾದ; ಹೊಸ ಯುಗಾರಂಭ ಎಂದು ಬಣ್ಣನೆ

೩. ವಜೀರಿಸ್ತಾನ್ ದಾಳಿಗೆ ಭಾರತ ಹೊಣೆ ಎಂಬ ಪಾಕಿಸ್ತಾನದ ಹೇಳಿಕೆಯನ್ನು ತಿರಸ್ಕರಿಸಿದ ಭಾರತ

೪. ಯುಎಸ್ ಓಪನ್ ಬ್ಯಾಡ್ಮಿಂಟನ್; ಮಹಿಳಾ ಸಿಂಗಲ್ಸ್‌ನಲ್ಲಿ ಭಾರತದ ತಾನ್ವಿ ಶರ್ಮಾ ಫೈನಲ್ ಪ್ರವೇಶ

೫. ಮಹಿಳಾ ಟಿ-೨೦ ಕ್ರಿಕೆಟ್; ಇಂಗ್ಲೆಂಡ್ ವಿರುದ್ಧ ಭಾರತಕ್ಕೆ ೯೭ ರನ್‌ಗಳ ಭರ್ಜರಿ ಗೆಲುವು

<><*<><>*><>

ಆಕಾಶವಾಣಿಯ ಜನಪ್ರಿಯ ಮಾಸಿಕ ಕಾರ್ಯಕ್ರಮ ಮನ್ ಕಿ ಬಾತ್‌ನಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ಇಂದು ಬೆಳಗ್ಗೆ ೧೧ ಗಂಟೆಗೆ ದೇಶ-ವಿದೇಶಗಳಲ್ಲಿರುವ ಭಾರತೀಯ ಸಮುದಾಯದೊಂದಿಗೆ ತಮ್ಮ ಮನದಾಳದ ಮಾತುಗಳನ್ನು ಹಂಚಿಕೊಳ್ಳಲಿದ್ದಾರೆ. ಇದು 'ಮನ್ ಕಿ ಬಾತ್' ಕಾರ್ಯಕ್ರಮದ ೧೨೩ನೇ ಆವೃತ್ತಿಯಾಗಿದೆ. ಈ ಕಾರ್ಯಕ್ರಮ ಆಕಾಶವಾಣಿ ಮತ್ತು ದೂರದರ್ಶನದ ಎಲ್ಲ ವಾಹಿನಿಗಳು, ಎಐಆರ್ ನ್ಯೂಸ್ ಜಾಲತಾಣ, ನ್ಯೂಸ್ ಆನ್ ಏರ್ ಮೊಬೈಲ್ ಆಪ್‌ನಲ್ಲಿ ಪ್ರಸಾರವಾಗಲಿದೆ. ಹಿಂದಿ ಅವತರಣಿಕೆಯ ನಂತರ ಪ್ರಾದೇಶಿಕ ಭಾಷೆಗಳಲ್ಲಿ ಈ ಕಾರ್ಯಕ್ರಮವನ್ನು ಕೇಳಬಹುದಾಗಿದೆ.

<><*<><>*><>

ಪ್ರಧಾನಿ ನರೇಂದ್ರ ಮೋದಿ ನಿನ್ನೆ ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದಲ್ಲಿರುವ ಗ್ರೂಪ್ ಕ್ಯಾಪ್ಟನ್ ಶುಭಾಂಶು ಶುಕ್ಲಾ ಅವರೊಂದಿಗೆ ಸಂವಾದ ನಡೆಸಿದರು. ಶುಕ್ಲಾ ಅವರು ಭಾರತದಿಂದ ಅತ್ಯಂತ ದೂರದಲ್ಲಿದ್ದರೂ, ಭಾರತೀಯರ ಹೃದಯಕ್ಕೆ ಹತ್ತಿರವಾಗಿದ್ದಾರೆ. ಅವರ ಪ್ರಯಾಣ ಹೊಸ ಯುಗದ ಶುಭಾರಂಭವನ್ನು ಸೂಚಿಸುತ್ತದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು. ಪರ್ಯಟನೆ ಭಾರತದಲ್ಲಿ ಶತಮಾನಗಳಷ್ಟು ಹಳೆಯದಾದ ಸಂಪ್ರದಾಯವಾಗಿದೆ ಮತ್ತು ಶುಕ್ಲಾ ಅವರು ಭೂಮಿ ತಾಯಿಯ ಪರಿಕ್ರಮವನ್ನು ಪ್ರದರ್ಶಿಸುವ ಅಪರೂಪದ ಅವಕಾಶವನ್ನು ಪಡೆದಿದ್ದಾರೆ ಎಂದಿರುವ ಪ್ರಧಾನಿ, ಶುಕ್ಲಾ ಅವರಿಗೆ ಅಭಿನಂದನೆ ಸಲ್ಲಿಸಿ, ಅವರ ಪಯಣಕ್ಕೆ ಶುಭ ಹಾರೈಸಿದ್ದಾರೆ.

ಧ್ವನಿ - ಪ್ರಧಾನಿ ನರೇಂದ್ರ ಮೋದಿ

ಗ್ರೂಪ್ ಕ್ಯಾಪ್ಟನ್ ಶುಭಾಂಶು ಶುಕ್ಲಾ, ಭಾರತವನ್ನು ಪ್ರತಿನಿಧಿಸಲು ಹೆಮ್ಮೆ ವ್ಯಕ್ತಪಡಿಸಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಅವರೊಂದಿಗಿನ ತಮ್ಮ ಅನುಭವಗಳನ್ನು ಹಂಚಿಕೊಂಡ ಕ್ಯಾಪ್ಟನ್ ಶುಕ್ಲಾ,

ತಾವು ಬಾಲ್ಯದಲ್ಲಿದ್ದಾಗ, ಗಗನಯಾತ್ರಿಯಾಗಬಹುದೆಂದು ಎಂದಿಗೂ ಊಹಿಸಿರಲಿಲ್ಲ. ಪ್ರಧಾನಿಯವರ ನಾಯಕತ್ವದಲ್ಲಿ ಇಂದಿನ ಭಾರತ ದೇಶದ ನಾಗಿಕರಿಗೆ ತಮ್ಮ ಕನಸುಗಳನ್ನು ನನಸಾಗಿಸಲು ಹಲವಾರು ಅವಕಾಶಗಳನ್ನು ನೀಡುತ್ತಿದೆ. ಭಾರತ ತ್ವರಿತಗತಿಯಲ್ಲಿ ಪ್ರಗತಿ ಸಾಧಿಸುತ್ತಿದೆ ಮತ್ತು ಬಾಹ್ಯಾಕಾಶದಲ್ಲಿ ತನ್ನದೇ ಆದ ನಿಲ್ದಾಣಗಳನ್ನು ಹೊಂದಲಿದೆ. ಎಂದು ಹೇಳಿದರು. ತಮ್ಮ ತರಬೇತಿಯ ಸಮಯದಲ್ಲಿ ಬಹಳಷ್ಟು ಕಲಿತಿರುವುದಾಗಿ ತಿಳಿಸಿದ ಅವರು, ಅವರ ಈ ಪಯಣ ಇಡೀ ದೇಶಕ್ಕೆ ಸಾಮೂಹಿಕ ಸಾಧನೆಯಾಗಿದೆ. ಭಾರತವನ್ನು ಮೊದಲ ಬಾರಿಗೆ ಬಾಹ್ಯಾಕಾಶದಿಂದ ನೋಡಿದಾಗ, ಭಾರತ ಅತ್ಯಂತ ಭವ್ಯವಾಗಿ ಮತ್ತು ನಕ್ಷೆಯಲ್ಲಿ ನೋಡುವುದಕ್ಕಿಂತ ಬೃಹದಾಕಾರವಾಗಿ ಕಾಣುತ್ತದೆ ಎಂದು ಹೇಳಿದರು.

ಧ್ವನಿ - ಗಗನಯಾತ್ರಿ ಶುಭಾಂಶು ಶುಕ್ಲಾ

ಇದೇ ೨೫ ರಂದು, ಭಾರತೀಯ ಗಗನಯಾತ್ರಿ ಶುಭಾಂಶು ಶುಕ್ಲಾ ಅವರನ್ನು ಹೊತ್ತ ಆಕ್ಸಿಯಮ್ -೪ ಮಿಷನ್ ಅನ್ನು ಅಮೆರಿಕದ ಫ್ಲೋರಿಡಾದ ಕೆನಡಿ ಬಾಹ್ಯಾಕಾಶ ಕೇಂದ್ರದಿಂದ ಉಡಾವಣೆ ಮಾಡಲಾಯಿತು. ೧೯೮೪ ರಲ್ಲಿ ವಿಂಗ್ ಕಮಾಂಡರ್ ರಾಕೇಶ್ ಶರ್ಮಾ ಸೋವಿಯತ್ ಕಾರ್ಯಾಚರಣೆಯ ಭಾಗವಾಗಿ ಬಾಹ್ಯಾಕಾಶ ಪ್ರಯಾಣವನ್ನು ಮಾಡಿದ ನಾಲ್ಕು ದಶಕಗಳ ನಂತರ, ಕ್ಯಾಪ್ಟನ್ ಶುಕ್ಲಾ, ಬಾಹ್ಯಾಕಾಶಕ್ಕೆ ಪ್ರಯಾಣಿಸಿದ ಎರಡನೇ ಭಾರತೀಯ ಗಗನಯಾತ್ರಿಯಾಗಿದ್ದಾರೆ

<><*<><>*><>

ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ಭಾರತದಲ್ಲಿ ಸಾಮಾಜಿಕ ಭದ್ರತಾ ವ್ಯಾಪ್ತಿಯಲ್ಲಿ ಐತಿಹಾಸಿಕ ವೃದ್ಧಿ ಕಂಡಿದೆ ಎಂದು ಕೇಂದ್ರ ಕಾರ್ಮಿಕ ಮತ್ತು ಉದ್ಯೋಗ ಸಚಿವ ಮನ್ಸುಖ್ ಮಾಂಡವೀಯ ಹೇಳಿದ್ದಾರೆ. ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ದೇಶದಲ್ಲಿ ಸಾಮಾಜಿಕ ಭದ್ರತಾ ವ್ಯಾಪ್ತಿ, ೯೪ ಕೋಟಿ ನಾಗರಿಕರಿಗೆ ತಲುಪಿದೆ ಎಂದಿರುವ ಸಚಿವರು, ಭಾರತದ ಸದೃಢ ಮತ್ತು ಎಲ್ಲರನ್ನೊಳಗೊಳ್ಳುವ ಸಾಮಾಜಿಕ ಭದ್ರತಾ ಜಾಲದ ನಿರ್ವಹಣದ ಈ ಪರಿವರ್ತನಾತ್ಮಕ ಪಯಣವನ್ನು ಗುರುತಿಸಿ ಶ್ಲಾಘಿಸಿದ್ದಕ್ಕಾಗಿ ಅಂತಾರಾಷ್ಟ್ರೀಯ ಕಾರ್ಮಿಕ ಸಂಸ್ಥೆಯ ಮಹಾ ನಿರ್ದೇಶಕ ಗಿಲ್ಬರ್ಟ್ ಹೌಂಗ್‌ಬೊ ಅವರಿಗೆ ಧನ್ಯವಾದ ತಿಳಿಸಿದರು. ಇದಕ್ಕೂ ಮುನ್ನ ಹೌಂಗ್‌ಬೊ ಅವರು, ಭಾರತದ ಸಾಮಾಜಿಕ ಭದ್ರತಾ ವ್ಯಾಪ್ತಿ, ೨೦೧೯ರ ೨೫ ಪ್ರತಿಶತದಿಂದ ೨೦೨೫ರಲ್ಲಿ ೬೪ ಪ್ರತಿಶತಕ್ಕೆ ಏರಿದೆ ಎಂಬ ಮಾಹಿತಿ ಹಂಚಿಕೊಂಡಿದ್ದರು.

<><*<><>*><>

ವಜೀರಿಸ್ತಾನ್‌ದಲ್ಲಿ ನಡೆದ ದಾಳಿಗೆ ಭಾರತವೇ ಕಾರಣವೆಂದು ಪಾಕಿಸ್ತಾನ ನೀಡಿರುವ ಅಧಿಕೃತ ಹೇಳಿಕೆಯನ್ನು ಭಾರತ ತಿರಸ್ಕರಿಸಿದೆ. ಪಾಕಿಸ್ತಾನದ ಖೈಬರ್ ಪಖ್ತುನಾಖ್ವ ಪ್ರಾಂತ್ಯದ ಉತ್ತರ ವಜೀರಿಸ್ತಾನ್ ಜಿಲ್ಲೆಯಲ್ಲಿ ನಿನ್ನೆ ಪಾಕ್ ಸೇನಾ ಬೆಂಗಾವಲು ಪಡೆಯ ಮೇಲೆ ನಡೆದ ಆತ್ಮಾಹುತಿ ಬಾಂಬ್ ದಾಳಿಯಲ್ಲಿ ೧೩ ಸೈನಿಕರು ಸಾವನ್ನಪ್ಪಿದ್ದು, ಹಲವರು ಗಾಯಗೊಂಡಿದ್ದಾರೆ. ಇದರ ಬೆನ್ನಲ್ಲೇ ಪಾಕಿಸ್ತಾನ, ದಾಳಿಯ ಹಿಂದೆ ಭರತದ ಕೈವಾಡವಿದೆ ಎಂದು ಆಧಾರರಹಿತವಾಗಿ ಘೋಷಿಸಿತ್ತು. ಈ ದಾವೆಯನ್ನು ಭಾರತ ತೀವ್ರವಾಗಿ ಖಂಡಿಸಿದೆ.

<><*<><>*><>

೧೯೭೫ ರಿಂದ ೧೯೭೭ ರವರೆಗಿನ ಅಲ್ಪಾವಧಿಯ ಆದರೆ ಕರಾಳ ಅವಧಿಯು ಪ್ರತಿಯೊಬ್ಬ ನಾಗರಿಕನ ಜೀವನದ ಮೇಲೆ ಪರಿಣಾಮ ಬೀರಿತು ಎಂದು ಕೇಂದ್ರ ಸಚಿವ ಡಾ.ಜಿತೇಂದ್ರ ಸಿಂಗ್ ಹೇಳಿದ್ದಾರೆ. ದೆಹಲಿ ವಿಧಾನಸಭೆಯಲ್ಲಿ ನಿನ್ನೆ 'ಸಂವಿದಾನ್ ಹತ್ಯಾ ದಿವಸ್' ಅಡಿಯಲ್ಲಿ ಆಯೋಜಿಸಲಾದ ವಿಚಾರ ಸಂಕಿರಣವನ್ನುದ್ದೇಶಿಸಿ ಮಾತನಾಡಿದ ಸಚಿವರು, ತುರ್ತು ಪರಿಸ್ಥಿತಿಯ ಸಮಯದಲ್ಲಿ ಮೂಲಭೂತ ಹಕ್ಕುಗಳನ್ನು ಅಮಾನತುಗೊಳಿಸಲಾಯಿತು. ಪತ್ರಿಕಾ ಸ್ವಾತಂತ್ರ್ಯವನ್ನು ಹತ್ತಿಕ್ಕಲಾಯಿತು ಮತ್ತು ಸಾವಿರಾರು ಜನರನ್ನು ವಿಚಾರಣೆಯಿಲ್ಲದೆ ಬಂಧಿಸಲಾಯಿತು ಎಂದರು. ನಗರಾಭಿವೃದ್ಧಿಯ ಹೆಸರಿನಲ್ಲಿ ಸಾಮೂಹಿಕ ಧ್ವಂಸ ಕಾರ್ಯಗಳನ್ನು ನಡೆಸಲಾಯಿತು ಎಂದು ಅವರು ತಿಳಿಸಿದರು. ಇದೇ ಸಂದರ್ಭದಲ್ಲಿ 'ತುರ್ತು ಪರಿಸ್ಥಿತಿಗೆ ೫೦' ಎಂಬ ಶೀರ್ಷಿಕೆಯ ಕಿರುಪುಸ್ತಕವನ್ನು ಬಿಡುಗಡೆ ಮಾಡಲಾಯಿತು.

<><*<><>*><>

ಕೊಲ್ಕತ್ತಾದ, ದಕ್ಷಿಣ ಕೊಲ್ಕತ್ತಾ ಕಾನೂನು ಕಾಲೇಜಿನಲ್ಲಿ ನಡೆದ ಸಾಮೂಹಿಕ ಲೈಂಗಿಕ ದೌರ್ಜನ್ಯ ಪ್ರಕರಣದಲ್ಲಿ ನಾಲ್ಕನೇ ಆರೋಪಿಯನ್ನು ಬಂಧಿಸಲಾಗಿದೆ. ಪ್ರಕರಣದ ಭಾಗವಾಗಿ ನಿನ್ನೆ ಕಾಲೇಜಿನ ಭದ್ರತಾ ಸಿಬ್ಬಂದಿಯನ್ನು ಪೊಲೀಸರು ಬಂಧಿಸಿದ್ದು, ಬಂಧಿತರ ಸಂಖ್ಯೆ ನಾಲ್ಕಕ್ಕೆ ಏರಿದೆ. ಇದೇ ೨೫ ರಂದು ಭದ್ರತಾ ಸಿಬ್ಬಂದಿಯ ಕೊಠಡಿಯಲ್ಲಿ ಇಬ್ಬರು ಹಿರಿಯ ವಿದ್ಯಾರ್ಥಿಗಳು ಮತ್ತು ಕಾಲೇಜಿನ ಹಳೆಯ ವಿದ್ಯಾರ್ಥಿ ಒಬ್ಬ ೨೪ ವರ್ಷದ ವಿದ್ಯಾರ್ಥಿನಿ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದ ಸಂಬಂಧ ನಾಲ್ಕು ಪ್ರಮುಖ ಆರೋಪಿಗಳಾದ ಮನೋಜ್ ಮಿಶ್ರಾ, ಪ್ರೋಮಿತ್ ಮುಖರ್ಜಿ ಮತ್ತು ಜೈದ್ ಅಹ್ಮದ್ ಅವರನ್ನು ಈ ಹಿಂದೆಯೇ ಬಂಧಿಸಲಾಗಿತ್ತು.

<><*<><>*><>

ಭಾರತವು, ಐದು ವರ್ಷದೊಳಗಿನ ಮಕ್ಕಳ ಮರಣ ಪ್ರಮಾಣದಲ್ಲಿ ಶೇಕಡಾ ೭೮ ರಷ್ಟು ಇಳಿಕೆ ಸಾಧಿಸಿದ್ದು, ಜಾಗತಿಕ ಶೇಕಡಾ ೬೧ ರಷ್ಟು ಇಳಿಕೆಯನ್ನು ಮೀರಿಸಿದೆ. ವಿಶ್ವಸಂಸ್ಥೆಯ, ಮಕ್ಕಳ ಮರಣ ಅಂದಾಜು ೨೦೨೪ ರ ಅಂತರ-ಸಂಸ್ಥೆ ಗುಂಪಿನ ವರದಿಯ ಪ್ರಕಾರ, ನವಜಾತ ಶಿಶು ಮರಣ ಪ್ರಮಾಣ, ಜಾಗತಿಕವಾಗಿ ಶೇಕಡ ೫೪ ಕ್ಕೆ ಹೋಲಿಸಿದರೆ, ಭಾರತದಲ್ಲಿ ಶೇಕಡಾ ೭೦ ರಷ್ಟು ಕಡಿಮೆಯಾಗಿದೆ. ಲಸಿಕೆ ವ್ಯಾಪ್ತಿಯನ್ನು ಸುಧಾರಿಸುವತ್ತ ನಿರಂತರ ಗಮನ ಹರಿಸುತ್ತಿರುವ ಭಾರತ, ಬಡ ಜನರನ್ನು ತಲುಪಲು ಪೂರ್ವಭಾವಿ ಮತ್ತು ಅಂತರ್ಗತ ವಿಧಾನವನ್ನು ತೆಗೆದುಕೊಂಡಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ. ೨.೯ ಕೋಟಿ ಗರ್ಭಿಣಿಯರು ಮತ್ತು ೨.೬ ಕೋಟಿ ಶಿಶುಗಳಿಗೆ ವಾರ್ಷಿಕವಾಗಿ ಉಚಿತ ಲಸಿಕೆ ಸೇವೆಗಳನ್ನು ಒದಗಿಸುವ ಸಾರ್ವತ್ರಿಕ ರೋಗನಿರೋಧಕ ಕಾರ್ಯಕ್ರಮದ ಮೂಲಕ ಭಾರತದ ರೋಗನಿರೋಧಕ ಶಕ್ತಿಯ ಅಚಲ ಬದ್ಧತೆಯು ಸ್ಪಷ್ಟವಾಗಿದೆ. ಲಸಿಕೆ ಅಭಿಯಾನಗಳ ನಿರಂತರ ಮತ್ತು ತೀವ್ರ ಅನುಷ್ಠಾನದ ಪರಿಣಾಮವಾಗಿ, ಒಟ್ಟು ಜನಸಂಖ್ಯೆಯಲ್ಲಿ ಭಾರತದ ಶೂನ್ಯ-ಡೋಸ್ ಮಕ್ಕಳ ಶೇಕಡಾವಾರು ಪ್ರಮಾಣವು ೨೦೨೩ ರಲ್ಲಿ ಶೇಕಡಾ ೦.೧೧ ರಿಂದ ೨೦೨೪ ರಲ್ಲಿ ಶೇಕಡಾ ೦.೦೬ ಕ್ಕೆ ಇಳಿಕೆಯಾಗಿದೆ ಎಂದು ಆರೋಗ್ಯ ಸಚಿವಾಲಯ ತಿಳಿಸಿದೆ.

<><*<><>*><>

ಅಮೆರಿಕದ ಅಯೋವಾದ ಕೌನ್ಸಿಲ್ ಬ್ಲಫ್ಸ್‌ನಲ್ಲಿ ನಿನ್ನೆ ರಾತ್ರಿ ನಡೆದ ೨೦೨೫ ರ ಯುಎಸ್ ಓಪನ್ ಬ್ಯಾಡ್ಮಿಂಟನ್‌ನಲ್ಲಿ, ಭಾರತದ ಉದಯೋನ್ಮುಖ ಬ್ಯಾಡ್ಮಿಂಟನ್ ತಾರೆ ತಾನ್ವಿ ಶರ್ಮಾ, ಉಕ್ರೇನ್‌ನ ಪೋಲಿನಾ ಬುಹೋರ್ವಾ ಅವರನ್ನು ನೇರ ಸೆಟ್‌ಗಳಿಂದ ಸೋಲಿಸುವ ಮೂಲಕ ಮಹಿಳಾ ಸಿಂಗಲ್ ನಲ್ಲಿ ಫೈನಲ್ ತಲುಪಿದರು. ಪಂಜಾಬ್‌ನ ಹೋಶಿಯಾರ್‌ಪುರದ ೧೬ ವರ್ಷದ ಆಟಗಾರ್ತಿ, ಮಹಿಳಾ ಸಿಂಗಲ್ಸ್ ಸ್ಪರ್ಧೆಯಲ್ಲಿ ವಿಶ್ವದ ೪೦ನೇ ಶ್ರೇಯಾಂಕಿತ ಬುಹೋರ್ವಾ ಅವರನ್ನು ೨೧-೧೪, ೨೧-೧೬ ಅಂತರದಲ್ಲಿ ಸೋಲಿಸಿ, ಪಂದ್ಯವನ್ನು ಕೇವಲ ೩೪ ನಿಮಿಷಗಳಲ್ಲಿ ಮುಗಿಸಿದರು. ಪ್ರಸ್ತುತ ವಿಶ್ವದ ೬೬ನೇ ಶ್ರೇಯಾಂಕಿತ ತಾನ್ವಿ, ವಿಶ್ವದ ೨೩, ೫೦ ಮತ್ತು ೫೮ನೇ ಶ್ರೇಯಾಂಕಿತ ಆಟಗಾರ್ತಿಯರನ್ನು ಒಳಗೊಂಡಂತೆ ಪಂದ್ಯಾವಳಿಯಾದ್ಯಂತ ಉನ್ನತ ಶ್ರೇಯಾಂಕಿತ ಆಟಗಾರ್ತಿಯರನ್ನು ಸೋಲಿಸಿದ್ದಾರೆ. ಇಂದು ಸಂಜೆ ನಡೆಯುವ ಫೈನಲ್‌ನಲ್ಲಿ ತಾನ್ವಿ ವಿಶ್ವದ ೨೧ನೇ ಶ್ರೇಯಾಂಕದ ಆಟಗಾರ್ತಿ ಚೀನಾದ ಬೀವೆನ್ ಜಾಂಗ್ ಅವರನ್ನು ಎದುರಿಸಲಿದ್ದಾರೆ. ಪಂದ್ಯ ಭಾರತೀಯ ಕಾಲಮಾನ ರಾತ್ರಿ ೮:೩೦ ಕ್ಕೆ ಪ್ರಾರಂಭವಾಗಲಿದೆ.

**<><*<><>*><>**

ನಾಟಿಂಗ್ ಹ್ಯಾಮ್‌ನ ಟ್ರೆಂಟ್‌ಬ್ರಿಡ್ಜ್‌ನಲ್ಲಿ ಕಳೆದ ರಾತ್ರಿ ನಡೆದ ಐದು ಪಂದ್ಯಗಳ ಮಹಿಳಾ ಅಂತಾರಾಷ್ಟ್ರೀಯ ಟಿ-೨೦ ಸರಣಿಯ ಮೊದಲ ಪಂದ್ಯದಲ್ಲಿ ಭಾರತದ ವನಿತೆಯರ ತಂಡ, ಇಂಗ್ಲೆಂಡ್ ವಿರುದ್ಧ ೯೭ ರನ್‌ಗಳ ಭರ್ಜರಿ ಜಯ ದಾಖಲಿಸಿದೆ. ಮೊದಲು ಬ್ಯಾಟಿಂಗ್ ಮಾಡಿದ ಭಾರತ, ನಿಗದಿತ ೨೦ ಓವರ್‌ಗಳಲ್ಲಿ ೫ ವಿಕೆಟ್ ನಷ್ಟಕ್ಕೆ ೨೧೦ ರನ್‌ಗಳಿಸಿತು. ಸ್ಮೃತಿ ಮಂದಾನ ಶತಕ ತಂಡ ಬೃಹತ್ ಮೊತ್ತ ಕಲೆಯಾಕುವಲ್ಲಿ ಸಹಕರಿಸಿತು. ೨೧೧ ರನ್‌ಗಳ ಗುರಿ ಬೆನ್ನತ್ತಿದ ಇಂಗ್ಲೆಂಡ್, ಕೇವಲ ೧೪.೫ ಓವರ್‌ಗಳಲ್ಲಿ ತನ್ನೆಲ್ಲಾ ವಿಕೆಟ್ ಕಳೆದುಕೊಂಡು ೧೧೩ ರನ್‌ಗಳಿಸಲಷ್ಟೇ ಶಕ್ತವಾಯಿತು. ತಮ್ಮ ಅತ್ಯುತ್ತಮ ಆಟಕ್ಕಾಗಿ ಸ್ಮೃತಿ ಮಂದಾನಗೆ ಪಂದ್ಯ ಶ್ರೇಷ್ಠ ಪ್ರಶಸ್ತಿ ನೀಡಲಾಯಿತು.

**<><*<><>*><>**

ಬರ್ಲಿನ್‌ನಲ್ಲಿ ನಿನ್ನೆ ನಡೆದ ಎಫ್‌ಐಎಚ್ ಪ್ರೊ ಲೀಗ್‌ನ ಹಾಕಿ ಪಂದ್ಯದಲ್ಲಿ ಭಾರತದ ವಿರುದ್ಧ ಚೀನಾ ೩-೦ ಅಂತರದ ಜಯ ಸಾಧಿಸುತು. ಈ ಸೋಲಿನ ಮೂಲಕ ಭಾರತೀಯ ಮಹಿಳಾ ಹಾಕಿ ತಂಡ ಪಟ್ಟಿಯಲ್ಲಿ ಒಂಬತ್ತನೇ ಸ್ಥಾನದಲ್ಲಿದ್ದು, ಇತರ ಪಂದ್ಯದ ಫಲಿತಾಂಶಗಳು ಮತ್ತು ಇಂದು ಚೀನಾ ವಿರುದ್ಧದ ತಮ್ಮ ಮುಂದಿನ ಪಂದ್ಯದಲ್ಲಿ ಗೆಲುವು ಪಡೆಯುವದರ ಮೇಲೆ ಅವಲಂಬಿತವಾಗಿದೆ.

**<><*<> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <>*><>**